# ಆರುವ ದೀಪ



ಕಲೆ : ಪುರುಷೋತ್ತಮ ಕಾರಂತ

ಒಂದು ದಿನ ಬುದ್ಧನ ವಿಹಾರಕ್ಕೆ ಒಬ್ಬ ಯುವಕ ಬಂದ. ಆರೋಗ್ಯದ, ಸಿರಿತನದ ಲಕ್ಷಣಗಳಿದ್ದವು, ಅವನ ಮೈಮೇಲೆ. ಮನೆಯಲ್ಲಿ ಪ್ರೀತಿಯ ಮಗು ಮತ್ತು ಅಕ್ಕರೆಯ ಮಡದಿಯಿದ್ದಳು. ವಿಹಾರದಲ್ಲಿ ಶಾಂತಸಾಗರದಂತಿದ್ದ ಬುದ್ಧನ ಮುಖವನ್ನು ನೋಡಿ ಮಾರುಹೋದ. ಸಂಜೆಯ ಪ್ರವಚನ ಮುಗಿಯುವ ತನಕ ಅಲ್ಲಿಯೇ ಕುಳಿತ. ಕತ್ತಲಾದಾಗ ಶಿಷ್ಯ ಆನಂದನು ದೀಪವೊಂದನ್ನು ಹಿಡಿದು ಬಂದ. ಮರುಕ್ಷಣವೇ ದೀಪವು ಗಾಳಿಯಿಂದ ಆರಿ ಹೋಯಿತು. ಭಗವಾನ್ ಬುದ್ಧ ಹೇಳಿದ, “ಇದೇ ನಿರ್ವಾಣ.... ಈ ದೀಪದಂತೆ ಜಗದೊಳಿರುವ ಜೀವಿಗಳೆಲ್ಲ ಒಂದು ದಿನ ಆರಲಿವೆ. ಈ ಬಗೆಯಲ್ಲಿ ಮರೆಯಾಗುವುದೇ ನಿರ್ವಾಣ..” ಕತ್ತಲಾದಂತೆ ಬಂದವರೆಲ್ಲ ತಮ್ಮ ತಮ್ಮ ಮನೆಗಳಿಗೆ ಹಿಂತಿರುಗಿದರು. ಯುವಕ ಮೂರ್ತಿಯಂತೆ ಕುಳಿತೇ ಇದ್ದ. ಬುದ್ಧ ಕೇಳಿದ ಅಚ್ಚರಿಯಿಂದ:

“ಯಾರದು?”

ಯುವಕನೆಂದ : “ನಾನೊಂದು ದೀಪ, ಆರುವ ದೀಪ.”

ಬುದ್ಧ ಕೇಳಿದ : “ಹೂಂ, ಮನೆಯಲ್ಲಿ ಪತಿಸುತರು ಇರಬೇಕಲ್ಲ !”

ಯುವಕ ಹೇಳಿದ : “ಅವರೂ ಆರುವ ದೀಪಗಳೇ !”

ಸರಿ, ಸಂಘಕ್ಕೆ ಸೇರಿದ ಯುವಕ. ಮನೆಯವರು ಬಂದು ಕರೆದರು, ಗೋಳಾಡಿದರು. ಮಡದಿಯು ಮುದ್ದಾದ ಶಿಶುವನ್ನು ತಂದು ಪಾದದ ಬಳಿಯಿಟ್ಟು, “ಇದು ನಿಮ್ಮ ಮಗು” ಎಂದಳು. ಯುವಕ ಮಿಸುಕಾಡಲಿಲ್ಲ. ಇದನ್ನು ಕಂಡು “ಇದು ಜಡದೇಹ. ಇಲ್ಲೀಗ ನನ್ನ ಪತಿ ಇಲ್ಲ” ಎಂದು ಮರಳಿದಳು ಆ ಯುವತಿ.